# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ಉಪವಿಭಾಗ, 7ನೇ ಮಹಡಿ,**
**ಪಿ.ಯು.ಕಟ್ಟಡ, ಎಂ.ಜಿ.ರಸ್ತೆ, ಮೇಯೊಹಾಲ್, ಬಿ.ಬಿ.ಎಂ.ಪಿ. ಬೆಂಗಳೂರು–560001**

ದಿನಾಂಕ : 22/01/2021

ಸಂಖ್ಯೆ : ಸ.ಕಾ.ಅ/ಶಾಂ.ಉವಿ/ಪಿಆರ್/369/2020–21

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ : 116 ನೀಲಸಂದ್ರದ ವಾರ್ಡ್ ಸಮಿತಿ ಸಭೆಯನ್ನು ಕೆನೋಪಿ ರೆಸ್ಟೋರೆಂಟ್, ಪಿ.ಯು.ಕಟ್ಟಡ, ಎಂ.ಜಿ.ರಸ್ತೆ ಬೆಂಗಳೂರು. ಇಲ್ಲಿ ದಿನಾಂಕ : 22-01-2021ರಂದು ಮಧ್ಯಾಹ್ನ 3:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು

### ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು

| ಕ್ರ.ಸಂ | ಸದಸ್ಯರ ಹೆಸರುಗಳು |
|---|---|
| 1 | ಶ್ರೀ ಸಂಗಮಿತ್ರ ನೊಡಲ್ ಅಧಿಕಾರಿ (ನೀಲಸಂದ್ರ–116) ಹಾಗೂ ಉಪ ಆರೋಗ್ಯ ಅಧಿಕಾರಿಗಳು (ಪೂರ್ವ ವಲಯ) |
| 2 | ಶ್ರೀಮತಿ ಎಂ. ಫರ್ಜಾನಾ , ಸಹಾಯಕ ಅಭಿಯಂತರರು, (ಶಾಂತಿನಗರ) ವಾರ್ಡ್ ಕಮಿಟಿ ಕಾರ್ಯದರ್ಶಿ. |
| 3 | ಶ್ರೀ ಹರ್ಷ ಎಸ್. ಕಿರಿಯ ಅಭಿಯಂತರರು (ಕಾರ್ಯದರ್ಶಿ) |
| 4 | ಶ್ರೀ ಅಪ್ಪುರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ, ಘನತ್ಯಾಜ್ಯಾ) |
| 5 | ಶ್ರೀ ಸಗಾಯ್‌ರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು (ನೀಲಸಂದ್ರ) |
| 6 | ಶ್ರೀ ನೀಲಾಂಜನಪ್ಪಾ, ಕಿರಿಯ ಆರೋಗ್ಯ ಪರಿವೀಕ್ಷಕರ, (ನೀಲಸಂದ್ರ) |
| 7 | ಶ್ರೀ ಗುರುಮೂರ್ತಿ, ಕಂದಾಯ ಪರಿವೀಕ್ಷಕರು (ನೀಲಸಂದ್ರ) |
| 8 | ಶ್ರೀ ಶ್ರೀನಿವಾಸ ಸಹಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲೂ.ಎಸ್.ಎಸ್.ಬಿ, |
| 9 | ಶ್ರೀ ಅಕ್ರಮ್ ಪಾಷ ಸಹಾಯಕ ಅಭಿಯಂತರರು, ಬಿ.ಡಬ್ಲೂ.ಎಸ್.ಎಸ್.ಬಿ, |
| 10 | ಶ್ರೀ ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲೂ.ಎಸ್.ಎಸ್.ಬಿ, |
| 11 | ಶ್ರೀ ವೆಂಕಟೇಶ್ವರ್‌ರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 12 | ಶ್ರೀ ನವೀನ್ ಕುಮಾರ, ಮಾರ್ಷಲ್ |
| 13 | ಶ್ರೀ ಪುಟ್ಟಪ್ಪ ಎ.ಎಸ್.ಐ. ಆಡುಗೋಡಿ, ಸಂಚಾರ ಪೊಲೀಸ್ ಇಲಾಖೆ |
| 14 | ಶ್ರೀ ಮಂಜಪ್ಪ, ಸಹಾಯಕ ಅಭಿಯಂತರರು, ವಿದ್ಯುತ್, ಬಿಬಿಎಂಪಿ. |
| 15 | ಶ್ರೀ ದೇವರಾಜ್, ಅರಣ್ಯ ಇಲಾಖೆ |
| 16 | ಶ್ರೀಮತಿ ಶಿಲ್ಪಾ, ಸಹಾಯಕ ಅಭಿಯಂತರರು, ಸ್ಟಾಮ್ ವಾಟರ್ ಡ್ರೇನ್ (ಎಸ್.ಡಬ್ಲೂ.ಡಿ) |
| 17 | ಶ್ರೀಮತಿ ಷರೀಫ್, ಸದಸ್ಯರು (ನೀಲಸಂದ್ರ) |
| 18 | ಶ್ರೀಮತಿ ಸುಮತಿ, ಸದಸ್ಯರು (ನೀಲಸಂದ್ರ) |
| 19 | ಶ್ರೀ ಇದ್ರೀಜ್, ಸದಸ್ಯರು (ನೀಲಸಂದ್ರ) |
| 20 | ಶ್ರೀ ಅಲ್‌ಫೋಜ್, ಸದಸ್ಯರು (ನೀಲಸಂದ್ರ) |
| 21 | ಶ್ರೀ ಮುತ್ತು, ಸದಸ್ಯರು (ನೀಲಸಂದ್ರ) |
| 22 | ಶ್ರೀ ಗೋವಿಂದ್ ರಾಜು ಸದಸ್ಯರು (ನೀಲಸಂದ್ರ) |

ಶಾಂತಿನಗರ ಕ್ಷೇತ್ರದ ಮಾನ್ಯ ಶಾಸಕರಾದ ಎನ್.ಎ.ಹ್ಯಾರೀಷ್ ರವರು ಸಭೆಯಲ್ಲಿ ಪಾಲ್ಗೊಂಡು ಮಾರ್ಗದರ್ಶನ ನೀಡಿದರು

ಸಮಿತಿ ಅಧ್ಯಕ್ಷಕರಾದ, ಶ್ರೀಮತಿ ಡಾ॥ ಸಂಗಮೀತ್ರ ನೊಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸುತ್ತಾ ಸಭೆಯಲ್ಲಿ ಸದಸ್ಯರನ್ನು, ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯಲ್ಲಿ ಕೈಗೊಂಡಿರುವ ನಡುವಳಿಗಳ ಕ್ರಮಗಳ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಮುಂದುವರೆಸುತ್ತಾ ಸಭೆಯನ್ನು ಪ್ರಾರಂಭಿಸಿದರು.

| ಕ್ರ.ಸಂ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP)** | |
| 1 | **ಕಾಮಗಾರಿ ಇಲಾಖೆ (Engineering Department)** | |
| | ➤ ಶ್ರೀ ಪೆರುಮಾಳ್ ರವರು ತಮ್ಮ ಪತ್ರದಲ್ಲಿ – ಎಲ್.ಆರ್.ನಗರದ 4ನೇ ಅಡ್ಡರಸ್ತೆಯಿಂದ 7ನೇ ಅಡ್ಡರಸ್ತೆವರೆಗೆ ಡ್ರೇನ್ ಡಿಸಿಲ್ಟಿಂಗ್ ಕೆಲಸವನ್ನು ಕೈಗೊಳ್ಳಬೇಕೆಂದು ಕೋರಿದರು.<br>➤ ಶ್ರೀ ಮುತ್ತು, ಸದಸ್ಯರು (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ – ಎಲ್.ಆರ್.ನಗರ 3ನೇ ಅಡ್ಡರಸ್ತೆ ಇಂದ 8ನೇ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ಹಾಕಲು, ಪಾಟ್‌ಹೋಲ್‌ಗಳನ್ನು ಮುಚ್ಚಲು ಹಾಗೂ 26ನೇ ಅಡ್ಡರಸ್ತೆಯ ಬಳಿ ಇರುವ ಶೌಚಾಲಯವನ್ನು ತೆರವುಗೊಳಿಸಲು ಕೋರಿದರು | ಸಹಾಯಕ ಅಭಿಯಂತರರು, ನೀಲಸಂದ್ರ |
| 2 | **ಆರೋಗ್ಯ ಇಲಾಖೆ (Health Department)** | |
| | ➤ ಶ್ರೀಮತಿ ಸುಮತಿ ರವರು ಪತ್ರದಲ್ಲಿ –ವಾರ್ಡ್‌ನ ಫಾತೀಮಾಗಲ್ಲಿ ಹಾಗೂ ಮಸೀದ್ ರೋಡ್ ಅಡ್ಡರಸ್ತೆಗಳಲ್ಲಿ ಸಂಪರ್ಕವಾಗಿ ಔಷಧಿ ಸಿಂಪಡಣೆಯನ್ನು ಆಗುತ್ತಿಲ್ಲವೆಂದು ತಿಳಿಸಿದರು.<br>➤ ಶ್ರೀ ಸೈಯದ್ ಇದ್ರೀಜ್ ರವರು ತಮ್ಮ ಪತ್ರದಲ್ಲಿ – ಮುನೇಗೌಡ ಗಾರ್ಡ್‌ನ್ 1ನೇ ಅಡ್ಡರಸ್ತೆ ಇಂದ 4ನೇ ಅಡ್ಡರಸ್ತೆ ವರೆಗೆ ಸಂಪರ್ಕವಾಗಿ ಔಷಧಿ ಸಿಂಪಡಣೆಯನ್ನು ಆಗುತ್ತಿಲ್ಲವೆಂದು ತಿಳಿಸಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು |
| 3 | **ಘನತ್ಯಾಜ್ಯ ನಿರ್ವಹಣೆ ಶಾಂತಿನಗರ (SWM)** | |
| | ➤ ಶ್ರೀ ಸೈಯದ್ ಇದ್ರೀಜ್ ರವರು ತಮ್ಮ ಪತ್ರದಲ್ಲಿ – ರೋಜ್‌ಗಾರ್ಡ್‌ನ್ ಮುನೇಗೌಡ ಗಾರ್ಡ್‌ನ ಬಳಿ ಇರುವ ಖಾಲಿ ಜಾಗದಲ್ಲಿ ಅನಧಿಕೃತವಾಗಿ ಕಸವನ್ನು ಹಾಕುತಿದ್ದು ಸೂಕ್ತ ಕ್ರಮಕೈಗೊಳ್ಳಲು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB DEPARTMENT)** | |
| | ➤ ಶ್ರೀ ಸೈಯದ್ ಇದ್ರೀಸ್ ರವರು ಪತ್ರದಲ್ಲಿ – ಎಂ.ಜಿ.ಗಾರ್ಡ್‌ನ್ 1ನೇ ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳನ್ನು ಸ್ವಚ್ಛಗೊಳಿಸಿ ಹೂಳನ್ನು ತೆರವುಗೊಳಿಸಿರುವುದಿಲ್ಲ ಹಾಗೂ ಮ್ಯಾನ್‌ಹೋಲ್ ಗಳನ್ನು ಮುಚ್ಚಿರುವುದಿಲ್ಲ. ಇದರ ಬಗ್ಗೆ ಕ್ರಮಕೈಗೊಳ್ಳಲು ತಿಳಿಸಿದರು.<br>➤ ಶ್ರೀ ಮುತ್ತು, ಸದಸ್ಯರು (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ– ಎಲ್.ಆರ್.ನಗರ ಅಡ್ಡರಸ್ತೆಗಳಲ್ಲಿ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲ, ಸ್ಯಾನಿಟರಿ ಪಂಪ್‌ಗಳನ್ನು ಬದಲಿಸುವ ಕಾರ್ಯಚರಣೆ, ಸ್ಲಮ್ ಬೋರ್ಡ್ ಕ್ವಾರ್ಟಸ್ ಬಳಿ ಒಳಚರಂಡಿ ಬ್ಲಾಕ್ ಆಗಿರುತ್ತದೆ ಹಾಗೂ ಮ್ಯಾನ್‌ಹೋಲ್‌ಗಳ ಅಗ್ಗು ತಗ್ಗುಗಳನ್ನು ಸರಿಪಡಿಸಲು ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB |

| | | |
|---|---|---|
| 5 | **ಪೊಲೀಸ್ ಇಲಾಖೆ (ಸಂಚಾರ ಮತ್ತು ಕಾ.ಸು) (Traffic Police, Law & Order)** | |
| | ಶ್ರೀ ಸೈಯದ್ ಇದ್ರೀಸ್ ರವರು ಪತ್ರದಲ್ಲಿ –ಎಂ.ಜಿ.ಗಾರ್ಡನ್ 1ನೇ ಹಾಗೂ 3ನೇ ಅಡ್ಡರಸ್ತೆಗಳಲ್ಲಿ ಕಾನೂನು ಬಾಹೀರವಾಗಿ ಅನಧಿಕೃತ ಚಟುವಟಿಕೆಗಳು ನಡೆಯುತ್ತಿದ್ದು ಹಾಗೂ ಬಹಳಷ್ಟು ಜನ ಗುಂಪು ಸೇರುವುದು ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು. | Ashoknagar/Adugodi Traffic Police , Law& Order Department |
| 6 | **ವಿದ್ಯುತ್ ಇಲಾಖೆ (ELECTRICAL DEPARTMENT)** | |
| | ಶ್ರೀ ಸೈಯದ್ ಇದ್ರೀಸ್ ರವರು ಪತ್ರದಲ್ಲಿ – ಎಂ.ಜಿ. ಗಾರ್ಡನ್ 1ನೇ. 3ನೇ,4ನೇ ಮತ್ತು 5ನೇ ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳ ಕೊರತೆಯಿದ್ದು ಹೊಸದಾಗಿ ಅಳವಡಿಸಲು ಕೋರಿದರು.<br>ಶ್ರೀ ಗೋವಿಂದ್ ರಾಜು ರವರು ತಮ್ಮ ಪತ್ರದಲ್ಲಿ – ಎಲ್.ಆರ್.ನಗರ. 11ನೇ ಅಡ್ಡರಸ್ತೆ. 11ನೇ ಮುಖ್ಯರಸ್ತೆ<br>ಶ್ರೀ ಮುತ್ತು. ಸದಸ್ಯರು (ನೀಲಸಂದ್ರ) ರವರು ತಮ್ಮ ಪತ್ರದಲ್ಲಿ– ಎಲ್.ಆರ್.ನಗರ ವೃತ್ತದ ಬಳಿ ಹೈಮಾಸ್ಟ್ ಲೈಟನ್ನು ಅಳವಡಿಸಲು ಹಾಗೂ ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳು ಹಾಳಾಗಿದ್ದು ಅದನ್ನು ಸರಿಪಡಿಸಲು ಕೋರಿದರು. | ಸಹಾಯಕ ಅಭಿಯಂತರರು ವಿದ್ಯುತ್ |

ಅಂತಿಮವಾಗಿ ಅಧ್ಯಕ್ಷಕರು ಮಾತನಾಡುತ್ತಾ ಮೇಲೆ ತಿಳಿಸಿರುವಂತೆ ಎಲ್ಲಾ ಅಧಿಕಾರಿಗಳು ಕೆಲಸ ನಿರ್ವಹಿಸಲು ಕೋರುತ್ತಾ. ಮುಂದಿನ ಸಭೇಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದಸ್ಯರುಗಳಿಗೆ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರುಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿಗಳು**
**ಸಹಾಯಕ ಅಭಿಯಂತರರು**
**ವಾರ್ಡ್ –116 ನೀಲಸಂದ್ರ**

**ಅಧ್ಯಕ್ಷರು ಮತ್ತು**
**ನೋಡಲ್ ಅಧಿಕಾರಿ**
**ವಾರ್ಡ್ –116 ನೀಲಸಂದ್ರ**

**ಪ್ರತಿಗಳನ್ನು :-**

1) ಮಾನ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2) ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4) ವಲಯ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ಉಪ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ (ಘನತ್ಯಾಜ್ಯ ನಿರ್ವಹಣೆ) ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸಿದೆ.

8) ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ, ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸಿದೆ.

9) ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಅವಗಾಹನೆಗೆ ಸಲ್ಲಿಸಿದೆ.

11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ರವರ ಅವಗಾಹನೆಗೆ ಸಲ್ಲಿಸಿದೆ.

12) ಅಡುಗೋಡಿ/ಅಶೋಕನಗರ, ಟ್ರಾಫಿಕ್ ಮತ್ತು ಲಾ & ಆರ್ಡರ್ ಪೊಲೀಸ್ ಇಲಾಖೆ, ರವರ ಅವಗಾಹನೆಗೆ ಸಲ್ಲಿಸಿದೆ.

13) ಆರೋಗ್ಯಾಧಿಕಾರಿಗಳು, ಶಾಂತಿನಗರ, ರವರ ಅವಗಾಹನೆಗೆ ಸಲ್ಲಿಸಿದೆ.

14) ಕಛೇರಿ ಕಡತಕ್ಕೆ.